ಕರ್ನಾಟಕ ಸರ್ಕಾರ
(ವಾಣಿಜ್ಯ ತೆರಿಗೆಗಳ ಇಲಾಖೆ)

ಸಂಖ್ಯೆ: ವಾತೆಜಂಆ(ಆ)/ಮೌತೆವಿ-6/
ಸಿಆರ್-04/16-17

T ~ 296

ವಾಣಿಜ್ಯ ತೆರಿಗೆಗಳ ಜಂಟಿ ಆಯುಕ್ತರು(ಆಡಳಿತ) ರವರ ಕಚೇರಿ,
ಮೌಲ್ಯವರ್ಧಿತ ತೆರಿಗೆ ವಿಭಾಗ-6, ಕೆ.ಐ.ಎ.ಡಿ.ಬಿ.ಕಟ್ಟಡ, 'ಬಿ' ಬ್ಲಾಕ್,
3ನೇ ಮಹಡಿ, 4ನೇ ಫೇಸ್, ಪೀಣ್ಯ 2ನೇ ಹಂತ, ಬೆಂಗಳೂರು,
ದೂ.ಸಂ.: 080-28363426. ದಿನಾಂಕ: 23-05-2016

# ಟೆಂಡರ್ ಪ್ರಕ್ರಿಯೆ

GL-1217/16-17
25-05-16

ವಿಷಯ: ವಾಣಿಜ್ಯ ತೆರಿಗೆ ಇಲಾಖೆಯಲ್ಲಿನ ಈ ವಿಭಾಗದ ವಿವಿಧ ಕಚೇರಿಗಳಿಗೆ ಸಾಮಾನ್ಯ ಟೆಂಡರ್ ಪ್ರಕ್ರಿಯೆ ಮುಖೇನ ಖಾಸಗಿ ವಾಹನಗಳನ್ನು ಬಾಡಿಗೆಗೆ ಪಡೆದುಕೊಳ್ಳುವ ಬಗ್ಗೆ.

ಉಲ್ಲೇಖ: ಮಾನ್ಯ ವಾಣಿಜ್ಯ ತೆರಿಗೆ ಆಯುಕ್ತರು(ಕ), ಬೆಂಗಳೂರು ರವರ ಸುತ್ತೋಲೆ ಸಂಖ್ಯೆ: ವಿಹೆಚ್‌ಟಿ/ಸಿಆರ್-20/2013-14(Master File), ದಿನಾಂಕ: 21.04.2016.

-000-

1) ಮೇಲಂಡ ವಿಷಯಕ್ಕೆ ಸಂಬಂಧಪಟ್ಟಂತೆ ಈ ವಿಭಾಗದಲ್ಲಿ ತೆರಿಗೆ ಸಂಗ್ರಹಣೆ ಕಾರ್ಯ ಮತ್ತು ಆಡಿಟ್ ಕೆಲಸಕಾರ್ಯಗಳನ್ನು ನಿರ್ವಹಿಸುವ ಅಧಿಕಾರಿಗಳ ಉಪಯೋಗಕ್ಕಾಗಿ ವಾಹನಗಳನ್ನು ಗರಿಷ್ಠ ರೂ.25,000-00ಗಳ ಮಿತಿಗೆ ಒಳಪಟ್ಟು ಬಾಡಿಗೆ ಆಧಾರದ ಮೇಲೆ ಪಡೆಯಲು ಮಾನ್ಯ ವಾಣಿಜ್ಯ ತೆರಿಗೆಗಳ ಆಯುಕ್ತರವರಿಂದ ನಿರ್ದೇಶಿಸಲಾಗಿದೆ. ಆದ್ದರಿಂದ ಅರ್ಹತೆಯುಳ್ಳ ವಾಹನ ಮಾಲೀಕರೇ ಚಾಲಕರಾಗಿರುವ ವ್ಯಕ್ತಿಗಳು ಟೆಂಡರ್ ಪ್ರಕ್ರಿಯೆಯಲ್ಲಿ ಭಾಗವಹಿಸಬಹುದಾಗಿದೆ. ಈ ಕೆಳಕಂಡ ನಿಬಂಧನೆಗಳಿಗೆ ಒಳಪಟ್ಟು ವಾಹನವನ್ನು ಒದಗಿಸಲು ಸೀಲ್ ಮಾಡಿದ ಲಕೋಟೆಯಲ್ಲಿ ಖುದ್ದು ಸಲ್ಲಿಸಬಹುದಾಗಿದೆ. ಆಸಕ್ತ ಒಬ್ಬ ವಾಹನ ಮಾಲೀಕ/ಚಾಲಕರು ಒಂದು ವಾಹನದ ಸೇವೆಗೆ ಮಾತ್ರ ಅರ್ಜಿಯನ್ನು ಸಲ್ಲಿಸುವುದು. ಸರ್ಕಾರದ ಆದೇಶ ಸಂಖ್ಯೆ: ಡಿಪಿಎಆರ್ 96 ಶೀವಾನಿ 2012, ದಿನಾಂಕ: 23.08.2012ರಲ್ಲಿ ತಿಳಿಸಿರುವ ನಿಯಮಗಳನ್ವಯ 2011 ರ ಮತ್ತು ನಂತರದ ಮಾದರಿಯ ಹಳದಿ ಬಣ್ಣದ ಬೋರ್ಡ್ ಹೊಂದಿರುವ ಟ್ಯಾಕ್ಸಿ (ಟಾಟಾ ಇಂಡಿಕ/ವಿಸ್ಟಾ, ಮಾರುತಿ ಸ್ವಿಫ್ಟ್, ಟೊಯೊಟಾ ಲಿವಾ ಹಾಗೂ ಇತರೆ ಹ್ಯಾಚ್‌ಬ್ಯಾಕ್‌ವುಳ್ಳ) ವಾಹನಗಳ ಸೇವೆಯನ್ನು ಮಾತ್ರ ಪಡೆಯಲಾಗುವುದು.

1. **ಮುಚ್ಚಿದ ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ: 30-05-2016 ಸಮಯ: 5 ಘಂಟೆಯವರೆಗೆ.**
2. **ಟೆಂಡರ್‌ಗಳನ್ನು ತೆರೆಯುವ ದಿನಾಂಕ: 31-05-2016.**
3. **ಟೆಂಡರ್ ಪ್ರಕ್ರಿಯೆಯನ್ನು ಪೂರ್ಣಗೊಳಿಸಿ ಅಂತಿಮ ಪಟ್ಟಿಯನ್ನು ಪ್ರಕಟಿಸುವ ದಿನಾಂಕ: 31-05-2016.**
4. **ಟೆಂಡರ್‌ನ ಅವಧಿ: 01-06-2016 ರಿಂದ 31-03-2017.**

ಈ ವಿಭಾಗಕ್ಕೆ ಅವಶ್ಯಕತೆಯಿರುವ ಸ್ಥಳಗಳು ಮತ್ತು ವಾಹನಗಳ ಸಂಖ್ಯೆ ಈ ಕೆಳಗಿನಂತಿದೆ.

| | | | |
|---|---|---|---|
| 1. | ಬೆಂಗಳೂರು ನಗರ | – | 16 |
| 2. | ತುಮಕೂರು | – | 03 |
| 3. | ತಿಪಟೂರು | – | 01 |
| 4. | ಮಧುಗಿರಿ | – | 01 |

2) ವಾಹನದ ಪರವಾನಗಿಯ ದಿನಾಂಕ: 01-06-2016 ರಿಂದ 31-03-2017 ರವರೆಗೆ ಚಾಲ್ತಿಯಲ್ಲಿ ಇರತಕ್ಕದ್ದು. ವಾಹನದ ಮಾಡೆಲ್ 2011 ಅಥವಾ ನಂತರದ ವರ್ಷದ ಮಾಡೆಲ್‌ಗಳು ಅರ್ಹವಾಗಿರುತ್ತವೆ. ಈ ಕಚೇರಿಯ ಕಾರ್ಯವ್ಯಾಪ್ತಿಯ ಸ್ಥಳದ ಸುತ್ತಮುತ್ತಲಿನ ವಾಹನ ಚಾಲಕರುಗಳಿಗೆ, ಮೊದಲು ದಾಖಲೆ ಸಲ್ಲಿಸಿದವರಿಗೆ, ಉತ್ತಮ ಸ್ಥಿತಿಯ ಮತ್ತು ಇತ್ತೀಚಿನ ಮಾಡೆಲ್ ವಾಹನಗಳಿಗೆ ಆದ್ಯತೆ ಕೊಡಲಾಗುವುದು.

3) ಈ ವಿಭಾಗದ ಮುಖ್ಯಸ್ಥರು ಕಛೇರಿಯ ಕೆಲಸ ಕಾರ್ಯಗಳಿಗೆ ಅನುಗುಣವಾಗಿ ತಕ್ಷಣಕ್ಕೆ ಲಭ್ಯವಿರುವ ವಾಹನವನ್ನು ಬಾಡಿಗೆಯ ಮೇಲೆ ತೆಗೆದುಕೊಳ್ಳುವ ಸಂದರ್ಭದಲ್ಲಿ ವಾಹನದ ಗುಣಮಟ್ಟವನ್ನು ಮತ್ತು ಚಾಲನಾ ಕೌಶಲ್ಯವನ್ನು ಪರೀಕ್ಷೆಗೆ ಒಳಪಡಿಸಲಾಗುವುದು. ಯಾವುದೇ ಕಾರಣ ನೀಡದೆ ವಾಹನವನ್ನು ಬದಲಿಸುವ, ತಕ್ಷಣವೇ ನಿರಾಕರಿಸುವ ಹಕ್ಕು ಜಂಟಿ ಆಯುಕ್ತರಿಗೆ ಇರುತ್ತದೆ.

4) ವಾಣಿಜ್ಯ ತೆರಿಗೆ ಇಲಾಖೆಯು ಅಗತ್ಯವಿರುವ ವಾಹನಗಳನ್ನು ಇ-ಸಂಗ್ರಹಣೆ ಮುಖಾಂತರ ಬಾಡಿಗೆಗೆ ಪಡೆದುಕೊಳ್ಳಲು ಈ ಮೇಲೆ ಪ್ರಸ್ತಾಪಿಸಿರುವಂತೆ ಉಂಟಾಗುವ ತಾಂತ್ರಿಕ ಅಡಚಣೆಗಳ ಕಾರಣದಿಂದ ಇ-ಸಂಗ್ರಹಣೆಗೆ ಪರ್ಯಾಯವಾಗಿ ಸಾಮಾನ್ಯ ಟೆಂಡರ್ ಪ್ರಕ್ರಿಯೆಯ ಮುಖೇನ ವಾಹನಗಳ ಸೇವೆಯನ್ನು ಪಡೆದುಕೊಳ್ಳಲು ಸಾಧ್ಯವಾಗುವಂತೆ ಕೆ.ಟಿ.ಪಿ.ಪಿ.ಅಧಿನಿಯಮದ ನಿಯಮ 4(ಜಿ)ಗೆ ಉಲ್ಲೇಖ (7)ರಂತೆ ಸರ್ಕಾರವು ವಿನಾಯಿತಿಯನ್ನು ನೀಡಿರುತ್ತದೆ.

5) ಈ ವಿಭಾಗದ ಮುಖ್ಯಸ್ಥರಾದ ಜಂಟಿ ಆಯುಕ್ತರು(ಆಡಳಿತ), ಮೌ.ತೆ.ವಿ-6 ಇವರು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧಿನಿಯಮ 1999ರ ಅನ್ವಯ (Tender inviting and other accepting Authority) ಆಗಿರುತ್ತಾರೆ.

6) ಸಾಂಪ್ರದಾಯಿಕ ಟೆಂಡರ್ ಪ್ರಕ್ರಿಯೆಗೆ ಅನುಗುಣವಾಗಿ ಜನಪ್ರಿಯ ದಿನಪತ್ರಿಕೆಯೊಂದರಲ್ಲಿ ಅಂದರೆ ಕನ್ನಡ ಪ್ರಭ ಪತ್ರಿಕೆ ಹಾಗೂ ಕಚೇರಿಯ ಸೂಚನಾ ಫಲಕದಲ್ಲಿ ಪ್ರಕಟಿಸಲಾಗಿದೆ.

7) <u>ಅರ್ಜಿಯೊಂದಿಗೆ ಸಲ್ಲಿಸಬೇಕಾದ ದಾಖಲಾತಿಗಳು/ವಿವರಗಳು</u>.

1. ಅರ್ಜಿದಾರರ ಹೆಸರು, ವಿಳಾಸ ಹಾಗೂ ಇತ್ತೀಚಿನ ಪಾಸ್‌ಪೋರ್ಟ್ ಅಳತೆಯ ಭಾವಚಿತ್ರಗಳು – 2
2. ವಿಳಾಸದ ದಾಖಲೆ (ಮತದಾರರ ಗುರುತಿನ ಚೀಟಿ/ ರೇಷನ್‌ಕಾರ್ಡ್/ ಆಧಾರ್ ಕಾರ್ಡ್/ಪಾಸ್‌ಪೋರ್ಟ್ ಅಥವಾ ಇತರೆ ಭಾವಚಿತ್ರ ಹೊಂದಿರುವ ಗುರುತಿನ ಚೀಟಿ).
3. ವಾಹನದ ನೋಂದಣಿ ಪುಸ್ತಕದ ಪ್ರತಿ.
4. ವಾಹನದ ವಿಮಾ ಪಾಲಿಸಿಯ ಪ್ರತಿ.
5. ಪ್ರಾದೇಶಿಕ ಸಾರಿಗೆ ಅಧಿಕಾರಿಗಳು ನೀಡಿರುವ ವಾಹನ ಚಾಲನಾ ಪರವಾನಗಿ ಪ್ರತಿ.
6. ರೋಡ್ ಟ್ಯಾಕ್ಸ್ ಪಾವತಿಸಿರುವ ವಿವರ.
7. ಮೇಲ್ಕಂಡ ವಿವರಗಳು ಹಾಗೂ ಎಲ್ಲಾ ದಾಖಲಾತಿಗಳ ಪ್ರತಿಗಳನ್ನು ಸೀಲು ಮಾಡಿದ ಲಕೋಟೆಯಲ್ಲಿಟ್ಟು ಲಕೋಟೆಯ ಮೇಲೆ ದಪ್ಪ ಅಕ್ಷರದಲ್ಲಿ **<u>ಖಾಸಗಿ ವಾಹನ ಮಾಲೀಕರ/-- ಚಾಲಕರ ಹೊರಗುತ್ತಿಗೆ ಸೇವೆ – ಸಲ್ಲಿಸಲು ಅರ್ಜಿ</u>** ಎಂದು ನಮೂದಿಸುವುದು.
8. ಅಪೂರ್ಣ ವಿವರಗಳು ಹಾಗೂ ಮೇಲ್ಕಂಡ ದಾಖಲಾತಿಗಳನ್ನು ಸಲ್ಲಿಸದೇ ಇದ್ದ ಪಕ್ಷದಲ್ಲಿ ಅಂತಹ ಅರ್ಜಿಗಳನ್ನು ತಿರಸ್ಕರಿಸಲಾಗುವುದು.
9. ಯಾವುದೇ ಕಾರಣವನ್ನು ನೀಡದೆ ಅರ್ಜಿಯನ್ನು ತಿರಸ್ಕರಿಸುವ ಹಕ್ಕನ್ನು ಜಂಟಿ ಆಯುಕ್ತರು(ಆಡಳಿತ), ಡಿವಿಒ-6, ಬೆಂಗಳೂರು ಇವರಿಗೆ ಕಾಯ್ದಿರಿಸಲಾಗಿದೆ.

8) ಅರ್ಜಿಗಳನ್ನು ಖುದ್ದಾಗಿ ವಾಣಿಜ್ಯ ತೆರಿಗೆಗಳ ಜಂಟಿ ಆಯುಕ್ತರು(ಆಡಳಿತ), ಡಿ.ವಿ.ಒ-6, ಪೀಣ್ಯ, ಬೆಂಗಳೂರು ರವರ ಶಾಖೆಯಲ್ಲಿ ಸಲ್ಲಿಸುವುದು ಹಾಗೂ ಅರ್ಜಿಗಳ ಸ್ವೀಕೃತಿ ಅನುಸಾರವಾಗಿ ಕ್ರಮಸಂಖ್ಯೆ ನೀಡಲಾಗುವುದು.

**<u>ದರಪಟ್ಟಿ ವಿವರ ಪ್ರತಿ ತಿಂಗಳು:</u>**

**ಮೊದಲ 2,500 ಕಿ.ಮೀ. ಗರಿಷ್ಠ ರೂ.25,000-00 (ಇಪ್ಪತ್ತೈದು ಸಾವಿರ ರೂಪಾಯಿಗಳು ಮಾತ್ರ)**

**ನಂತರದ ಪ್ರತಿ ಕಿ.ಮೀ. ರೂ.5.50-00 (ಐದು ರೂಪಾಯಿ ಐವತ್ತು ಪೈಸೆಗಳು ಮಾತ್ರ)**

**(ವಿಶೇಷ ಸಂದರ್ಭಗಳಲ್ಲಿ ಮಾತ್ರ) 300 ಘಂಟೆಯ ನಂತರ ಪ್ರತಿ ಘಂಟೆಗೆ ರೂ.40-00 (ನಲವತ್ತು ರೂಪಾಯಿಗಳು ಮಾತ್ರ)**

9) ಒಂದೇ ದರಕ್ಕೆ ಹೆಚ್ಚು ಹೆಚ್ಚು ಅರ್ಜಿಗಳು ಬಂದಲ್ಲಿ ಅರ್ಜಿ ಹಾಕಿದ ದಿನಾಂಕವನ್ನು ಆದ್ಯತೆಯ ಮೇಲೆ ಪರಿಗಣಿಸಲಾಗುವುದು.